ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

# Bangalore Development Authority

ಸಂಖ್ಯೆ :
No ಬೆಂಅಪ್ರಾ/ನಯೋಸ/ಸಿಎಲ್‌ಯು/330/ 2010-11/195/2011-12.

ದಿನಾಂಕ :
Date : 15-07-11

## ಪ್ರಾರಂಭಿಕ ದೃಢೀಕರಣ ಪತ್ರ

ವಿಷಯ: ಬೆಂಗಳೂರು ನಗರ, ಕೆಂಪೇಗೌಡ ನಗರ, ವಾರ್ಡ್ ಸಂಖ್ಯೆ 49 ರಲ್ಲಿನ ಆಸ್ತಿ ಸಂಖ್ಯೆ 13 ಮತ್ತು 13/1 (5ನೇ ಮುಖ್ಯ ರಸ್ತೆ ) ರಲ್ಲಿನ 11303.30 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಮಾಡುವ ಬಗ್ಗೆ .

ಉಲ್ಲೇಖ:
1. ತಮ್ಮ ಪತ್ರ ದಿನಾಂಕ 15.02.2011.
2. ಸರ್ಕಾರದ ಆದೇಶ ಸಂಖ್ಯೆ ಸಂವ್ಯಶಾ:55:ಶಾಸನ 2002(p), ಬೆಂಗಳೂರು, ದಿನಾಂಕ 14.02.2005.
3. ಈ ಕಛೇರಿಯ ಪತ್ರದ ಸಂಖ್ಯೆ ಬೆಂಅಪ್ರಾ/ನಯೋಸ/ಸಿಎಲ್‌ಯು/330/10-11//2011-12, ದಿನಾಂಕ 26.05.2011ರ ಮೇರೆಗ ಅರ್ಜಿದಾರರು ದಿನಾಂಕ 01.06.2011 ರಂದು ಕೆನರಾ ಬ್ಯಾಂಕ್ ಚಲನ್ ನಂ.4196ರ ಮೂಲಕ ಸಂದಾಯಿಸಿರುವ ಉತ್ತಮಿಕೆ ಶುಲ್ಕ ₹2,26,066/-, ಪರಿಶೀಲನಾ ಶುಲ್ಕ ₹ 5,652/-, ಪೂರ್ಣಾಂಕಕ್ಕೆ ಶುಲ್ಕ ₹ 02/- ಒಟ್ಟು ₹ 2,31,720/- ಅನ್ನು ಸಂದಾಯಿಸಿರುವುದನ್ನು ಬೆಂಅಪ್ರಾದ ಆರ್ಥಿಕ ವಿಭಾಗದವರು ದಿನಾಂಕ 07.6.2011 ರಂದು ದೃಢೀಕರಿಸಿರುವುದು.

-()-

ಅರ್ಜಿದಾರರು ಬೆಂಗಳೂರು ನಗರ, ಕೆಂಪೇಗೌಡ ನಗರ, ವಾರ್ಡ್ ಸಂಖ್ಯೆ 49 ರಲ್ಲಿನ ಆಸ್ತಿ ಸಂಖ್ಯೆ 13 ಮತ್ತು 13/1 (5ನೇ ಮುಖ್ಯ ರಸ್ತೆ ) ರಲ್ಲಿನ 11303.30 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು **ಕೈಗಾರಿಕೆ** ಉಪಯೋಗದಿಂದ **ವಸತಿ** ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಕೋರಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಈ ಸಂಬಂಧ ಉಲ್ಲೇಖ (2) ರಲ್ಲಿನ ಸರ್ಕಾರದ ಆದೇಶದಂತೆ ಉತ್ತಮಿಕೆ ಶುಲ್ಕ ಹಾಗೂ ಪರಿಶೀಲನಾ ಶುಲ್ಕದ ಬಾಬ್ತು ಒಟ್ಟು ಮೊತ್ತ ₹ 2,31,720/- ಗಳನ್ನು ಸಂದಾಯ ಮಾಡುವಂತೆ ಅರ್ಜಿದಾರರಿಗೆ ತಿಳಿಸಿದ್ದು, ಅರ್ಜಿದಾರರು ₹ 2,31,720/- ಗಳನ್ನು ಪಾವತಿ ಮಾಡಿರುತ್ತಾರೆ. ಹಾಗೂ ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಸದಸ್ಯರ ವಿಭಾಗದಲ್ಲಿ ದೃಢೀಕರಿಸಿರುತ್ತಾರೆ.

ಆದುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-A, Sub Section (3) ರಂತೆ ಬೆಂಗಳೂರು ನಗರ, ಕೆಂಪೇಗೌಡ ನಗರ, ವಾರ್ಡ್ ಸಂಖ್ಯೆ 49 ರಲ್ಲಿನ ಆಸ್ತಿ ಸಂಖ್ಯೆ 13 ಮತ್ತು 13/1 (5ನೇ ಮುಖ್ಯ ರಸ್ತೆ ) ರಲ್ಲಿನ 11303.30 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು **ಕೈಗಾರಿಕೆ** ಉಪಯೋಗದಿಂದ **ವಸತಿ** ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಮಾಡಿ ಈ ಕೆಳಕಂಡ ನಿಬಂಧನೆಗಳಿಗೊಳಪಡಿಸಿ ಅನುಮತಿ ನೀಡಲಾಗಿದೆ.

.....2..

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು - 560 020.
T. Chowdaiah Road, Kumarapark West, Bangalore - 560 020. Facsimile : 2334 5799. E-mail : bda@vsnl.com

1. ಪ್ರಸ್ತಾಪಿತ ಪ್ರದೇಶದ ಕಟ್ಟಡ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ನಿಯಮಾವಳಿ ಅನುಸಾರ ಮಂಜೂರು ಮಾಡಿಸಿಕೊಳ್ಳುವುದು.
2. ಪ್ರಸ್ತಾಪಿತ ಜಮೀನಿನ ಸಂಬಂಧವಾಗಿ ತಪ್ಪು ಮಾಹಿತಿ / ದಾಖಲಾತಿಗಳನ್ನು ನೀಡಿದ್ದಲ್ಲಿ ಅರ್ಜಿದಾರರೇ ಹೊಣೆಗಾರರಾಗುವುದಲ್ಲದೇ ಭೂ-ಉಪಯೋಗದ ಆದೇಶ ತನ್ನಿಂತಾನಾಗಿಯೇ ರದ್ದಾಗುತ್ತದೆಂದು ತಿಳಿಯುವುದು.
3. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಪಡೆಯುವುದು ಹಾಗೂ ಅದರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು ಹಾಗೂ ಪ್ರತಿ ಚ.ಮೀ.ಗೆ 20 ಲೀಟರ್‌ನಂತೆ "ಮಳೆ **ನೀರು ಕೊಯ್ಲು**" ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
4. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರ ನಿಬಂಧನೆಗಳನ್ನು ಪಾಲಿಸತಕ್ಕದ್ದು.
5. ಪರಿಷ್ಕೃತ ಮಹಾಯೋಜನೆಯಲ್ಲಿ (RMP-2015) ಉದ್ದೇಶಿಸಿರುವ ರಸ್ತೆಗೆ ಅಗತ್ಯ ಜಾಗವನ್ನು ಕಾಯ್ದಿರಿಸುವುದು.
6. ಪ್ರಸ್ತಾಪಿತ ಪ್ರದೇಶದ ಪಶ್ಚಿಮ ಭಾಗದಲ್ಲಿ ಡ್ರೇನ್ ಹಾಯ್ದು ಹೋಗುತ್ತಿರುವುದರಿಂದ RMP-2015 ರ ವಲಯ ನಿಯಮಾವಳಿಯಂತೆ ಡ್ರೇನ್ ಮಧ್ಯ ಭಾಗದಿಂದ 15.0 ಮೀ. ಪ್ರದೇಶವನ್ನು Buffer ಎಂದು ಕಾಯ್ದಿರಿಸುವುದು.

ಕರಡು ಪತ್ರ ಆಯುಕ್ತರಿಂದ
ಅನುಮೋದನೆಯಾಗಿದೆ)

ಆಯುಕ್ತರ ಪರವಾಗಿ,
ಬೆಂಅಪ್ರಾ, ಬೆಂಗಳೂರು.

ಇವರಿಗೆ,

ಜಂಟಿ ವ್ಯವಸ್ಥಾಪಕ ನಿರ್ದೇಶಕರು,
M/s Stumpp Schuele & Somappa Pvt. Ltd.,
ನಂ.139/2, ಹೊಸೂರು ರಸ್ತೆ, ಕೋರಮಂಗಲ,
ಬೆಂಗಳೂರು-560 095.